ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,

ಸಿ.ಸಿ. ನಂ.: 268/2016

.........................................................................

CW 15
PW 14

| | | |
|---|---|---|
| ಹೆಸರು | : | ವಿದ್ಯಾಧರ ಬೈಕೇರಿಕರ್ |
| ತಂದೆಯ ಹೆಸರು | : | ದತ್ತಾರಾಮ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಸಿ ಪಿ ಐ,ಮಂಗಳೂರು. |
| ವಾಸಸ್ಥಳ | : | ಮಂಗಳೂರು. |

ದಿನಾಂಕ 18-06-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 18-11-2011 ರಿಂದ 02-10-2013 ರ ವರೆಗೆ ನಾನು ದಾಂಡೇಲಿಯ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18-07-2013 ರಂದು ಪೊಲೀಸ ಉಪಾಧೀಕ್ಷರು, ದಾಂಡೇಲಿ ಉಪ ವಿಭಾಗ ರವರ ಆದೇಶದಂತೆ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಕುರಿತು ಚಾಸಾ 14 ರವರಿಂದ ಪಡೆದುಕೊಂಡು ಚಾಸಾ 1 ರವರ ಹಳಿಯಾಳ ಸಿ ಪಿ ಐ ಕಚೇರಿಯಲ್ಲಿ ಹಾಜರುಪಡಿಸಿದ ಮೋಟಾರ ವಾಹನ ಸ್ಥಳ ದಂಡದ ರಜಿಸ್ಟರ್ ಅನ್ನು ನಗದು ಪುಸ್ತಕ ಮತ್ತು ಚಾಲನ ಪಡೆದ ಕಡತವನ್ನು ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಬರೆದು ವಶಕ್ಕೆ ಪಡೆದುಕೊಂಡು ಪಿ ಎಫ್ ಸಂಖ್ಯೆ 73/2013 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಜರುಗಿಸಿದ ಪಂಚನಾಮೆಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು **ನಿಪಿ 6 ಜೆ, 6 ಕೆ ಮತ್ತು 6 ಎಲ್** ಎಂದು ಗುರುತಿಸಲಾಯಿತು.

ನಂತರ ಸಾಕ್ಷಿದಾರರಾದ ಚಾಸಾ 10 ಮತ್ತು 11 ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡದ್ದೇನೆ.

ದಿನಾಂಕ 23-07-2013 ರಂದು ಹಳಿಯಾಳ ಪೊಲೀಸ ಠಾಣೆಯ ಚಾಸಾ 14 ರವರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಇಬ್ಬರು ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ಟಿಪ್ಪಣಿ ಪುಸ್ತಕ ಒಂದು ಅದನ್ನು ಪರಿಶೀಲಿಸಿ ಪಂಚನಾಮೆಯನ್ನು ಬರೆದು ಅದನ್ನು ವಶಕ್ಕೆ ಪಡೆದುಕೊಂಡು ಹಳಿಯಾಳ ಪಿ ಎಸ್ 75/2013 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು 02-00 ರಿಂದ 03-00 ಗಂಟೆಯ ವರೆಗೆ ಜರುಗಿಸಿರುತ್ತೇನೆ. ಅದನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು **ನಿಪಿ 11 ಇ ಮತ್ತು ಎಫ್** ಎಂದು ಗುರುತಿಸಲಾಯಿತು.

ನಂತರ ಸಾಕ್ಷಿದಾರರಾದ ಚಾಸಾ 12 ಮತ್ತು ಚಾಸಾ 14 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡದ್ದೇನೆ.

ದಿನಾಂಕ 25-07-2013 ರಂದು ಕಾರವಾರ ಜಿಲ್ಲಾ ಪೊಲೀಸ ಕಚೇರಿಗೆ ಇಬ್ಬರು ಪಂಚರನ್ನು ಬರಮಾಡಿಕೊಂಡು ಪೊಲೀಸ ಅಧೀಕ್ಷಕರ ಅನುಮತಿಯನ್ನು ಪಡೆದು, ಸಂಗ್ರಹ ಶಾಖೆಯ ಸಿಬ್ಬಂದಿಯಾದ ದಿ.ದ.ಸ ಆದ ಶ್ರೀ ಆನಂದ ಎ ನಾಯ್ಕ್ ರವರಿಂದ ದಾಖಲೆಗಳನ್ನು ಪಡೆದುಕೊಂಡು ಚಾಸಾ 6 ಮತ್ತು 7 ರವರ ಸಮಕ್ಷಮ ಪಂಚನಾಮೆಯನ್ನು 04-00 ರಿಂದ 06-00 ಗಂಟೆಯ ವರೆಗೆ ಜರುಗಿಸಿ ವಶಪಡಿಸಿಕೊಂಡು ಹಳಿಯಾಳ ಪೊಲೀಸ ಠಾಣಾ ಪಿ ಎಸ್ ನಂಬರ 76/2013 ರಂತೆ ಮಾನ್ಯ ನ್ಯಾಯಾಲಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 12 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ **12 ಜಿ ಮತ್ತು ಎಚ್** ಎಂದು ಗುರುತಿಸಲಾಯಿತು.

ನಂತರ ದಿನಾಂಕ 14-08-2013 ರಂದು ಆರೋಪಿತನು ಮಾನ್ಯ ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು, ನನ್ನ ಮುಂದೆ ಮಧ್ಯಾಹ್ನ 03-00 ಗಂಟೆಗೆ ಹಾಜರಾಗಿದ್ದು, ಅವರನ್ನು ದಸ್ತಗೀರ್ ಮಾಡಿ ದಸ್ತಗೀರ್ ನಿಯಮ ಪಾಲಿಸಿರುತ್ತೇನೆ ಹಾಗೂ ಇಬ್ಬರು ಪಂಚರಾದ ಚಾಸಾ 6 ಮತ್ತು 7 ರವರ ಸಮಕ್ಷಮ ಆರೋಪಿಯ ಸ್ವ ಖುಷಿ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಇಬ್ಬರು ಪಂಚರಾದ ಚಾಸಾ 6 ಮತ್ತು 7 ರವರನ್ನು ಬರಮಾಡಿಕೊಂಡು ಆರೋಪಿಯ ಕೋರಿಕೆಯ ಕೈಬರಹವನ್ನು ಪಡೆದುಕೊಂಡು, ಪಂಚನಾಮೆಯನ್ನು ಮಧ್ಯಾಹ್ನ 03-00 ರಿಂದ 05-00 ಗಂಟೆಯ ವರೆಗೆ ಜರುಗಿಸಿ ಅದನ್ನು ಠಾಣಾ ಪಿ ಎಫ್ ನಂಬರ 78/2013 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 13 ಸಿ** ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿಯನ್ನು ಅವರ ಮನೆಗೆ ಕರೆದುಕೊಂಡು ಬಂದು ಪಂಚರ ಸಮಕ್ಷಮ ಚಾಸಾ 8 ಮತ್ತು 9 ರವರ ಸಮಕ್ಷಮ ವಸತಿ ಗೃಹವನ್ನು ಪರಿಶೀಲನೆ ಮಾಡಿ ಆರೋಪಿಯ ಕೈ ಬರಹದ ಒಂದು ಡೈರಿಯನ್ನು ವಶಕ್ಕೆ ಪಡೆದುಕೊಂಡು ಪಂಚನಾಮೆಯನ್ನು ಸಾಯಂಕಾಲ 06-15 ರಿಂದ 07-15 ರ ವರೆಗೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಠಾಣಾ ಪಿ ಎಫ್ ನಂಬರ 79/2013 ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 20 ಸಿ** ಎಂದು ಗುರುತಿಸಲಾಯಿತು.

ಪಿ ಎಫ್ ನಂಬರ 73/2013 ರಂತೆ ಹಾಜರುಪಡಿಸಿದ ಒಂದು ಮೋಟಾರ ವಾಹನ ಸ್ಥಳ ದಂಡದ ರಜಿಸ್ಟರ್ ಅನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದೆ. ಅದನ್ನು ಸಾಕ್ಷಿ ಗುರುತಿಸಿರುತ್ತಾರೆ.

ಹಳಿಯಾಳ ವೃತ ನಿರೀಕ್ಷಕರ ಕಚೇರಿ ನಗದು ಪುಸ್ತಕವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದೆ.

ಚಲನ್ ಪುಸ್ತಕವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 5 ಎಂದು ಗುರುತಿಸಲಾಗಿದೆ.

ಹಳಿಯಾಳ ವೃತ ನಿರೀಕ್ಷಕರ ಕಚೇರಿ ಟಿಪ್ಪಣಿ ಪುಸ್ತಕವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 23 ಎಂದು ಗುರುತಿಸಲಾಗಿದೆ.

ಹಳಿಯಾಳ ವೃತ ನಿರೀಕ್ಷಕರ ಕಚೇರಿ ಸ್ಥಳ ದಂಡದ ಪುಸ್ತಕಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 10 ರಿಂದ 13 ಎಂದು ಗುರುತಿಸಲಾಗಿದೆ.

ಆರೋಪಿಯ ಕೋರಿಕೆಯ ಕೈ ಬರಹಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಈಗಾಗಲೇ **ನಿಪಿ 14 ರಿಂದ 19** ಎಂದು ಗುರುತಿಲಸಲಾಗಿದೆ.

ಆರೋಪಿಯ ಕೈ ಬರಹ ಡೈರಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಅದನ್ನು **ನಿಪಿ 24** ಎಂದು ಗುರುತಿಸಲಾಯಿತು.

ದಿನಾಂಕ 25-07-2013 ರಂದು ಜಿಲ್ಲಾ ಸಂಗ್ರಹ ಶಾಖೆಯಲ್ಲಿ ವಶಪಡಿಸಿಕೊಂಡ ಸ್ಥಳ ದಂಡ ಪುಸ್ತಕವನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಅದನ್ನು **ನಿಪಿ 25** ಎಂದು ಗುರುತಿಸಲಾಯಿತು.

ದಸ್ತಗಿರ್ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು, ಆತನನ್ನು ಗುರುತಿಸುವಿಕೆಯ ಬಗ್ಗೆ ಆತನ ಪರ ವಕೀಲರು ಯಾವುದೇ ತಕರಾರು ಇಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಚಾಸಾ 1 ಮತ್ತು ಚಾಸಾ 16 ರವರು ನನ್ನ ಇಲಾಖೆಯ ಅಧಿಕಾರಿಗಳು ಎಂದರೆ ಸರಿ. ಚಾಸಾ 10 ರಿಂದ 12 ರವರು ನಮ್ಮ ಇಲಾಖಾ ಸಿಬ್ಬಂದಿಗಳು ಎಂದರೆ ಸರಿ. ಆರೋಪಿಯು ಸಹ ನಮ್ಮ ಇಲಾಖಾ ಸಿಬ್ಬಂದಿ ಎಂದರೆ ಸರಿ. ಘಟನೆಯು ಯಾವ ದಿನಾಂಕದಂದು ಆಯಿತು ಎಂದರೆ ಸಾಕ್ಷಿ ಘಟನೆಯ ನಿರಂತರವಾಗಿ ನಡೆದಿದ್ದು, ನಿಖರವಾಗಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಪಂಚರ ಸಮಕ್ಷಮ ಮಾಡಿದ ಜಪ್ತುಪಂಚನಾಮೆ, ಘಟನಾ ಜಾಗದ ಪಂಚನಾಮೆ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆ ಎನ್ನುತ್ತಾರೆ. ನಿಪಿ 6 ರ ಜಪ್ತು ಪಂಚನಾಮೆಯನ್ನು ಯಾರು ಬರೆದರು ಎಂದರೆ ಸಾಕ್ಷಿ ಎಚ್ ಸಿ 425 ರವರು ಬರೆದಿದ್ದಾರೆ ಎನ್ನುತ್ತಾರೆ. ನಿಪಿ 11 ರಿಂದ 13 ಮತ್ತು 20 ರಂತೆ ಮಾಡಿದ ಪಂಚನಾಮೆಗಳನ್ನು ಯಾರು ಬರೆದರು ಎಂದರೆ ಸಾಕ್ಷಿ ಎಚ್ ಸಿ 425 ರವರು ಬರೆದಿದ್ದಾರೆ ಎನ್ನುತ್ತಾರೆ.

ನಾನು ಘಟನಾ ಜಾಗಕ್ಕೆ ಹೋಗಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಜಾಗದ ಪಂಚನಾಮೆ ಮಾಡುವ ಸಮಯದಲ್ಲಿ ಘಟನಾ ಜಾಗದ ನಕಾಶೆಯನ್ನು ರಚಿಸಿದ್ದೀರಾ ಎಂದರೆ ಸಾಕ್ಷಿ ಘಟನಾ ಜಾಗ ಹಳಿಯಾಳ ಪೊಲೀಸ ಠಾಣೆ ಆಗಿರುವುದರಿಂದ ಹಾಗೂ ಶಾಶ್ವತ ಕಟ್ಟಡ ಆಗಿರುವುದರಿಂದ ನಕಾಶೆಯನ್ನು ರಚಿಸಿರುವುದಿಲ್ಲ ಎನ್ನುತ್ತಾರೆ. ಚಾಸಾ 1 ರವರು ನಿಮ್ಮ ಇಲಾಖೆಯ ಅಧಿಕಾರಿ ನನ್ನ ಸಮಕ್ಷಮ ಯಾವುದೇ ಮರುಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಜಾಗಕ್ಕೆ ಹೋಗಿಲ್ಲ, ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರಿಂದ 9 ರವರ ಸಮಕ್ಷಮ ನಿಪಿ 3, 4, 5, 10 ರಿಂದ 19, 23 ರಿಂದ 25 ರಂತೆ ಗುರುತಿಸಲಾದ ದಾಖಲೆಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ 10 ರಿಂದ 13 ರವರು ನನ್ನ ಸಮಕ್ಷಮ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ 14 ರವರು ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ಹಾಜರುಪಡಿಸಿದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಸಮಕ್ಷಮ ಯಾವುದೇ ಸ್ವ-ಖುಷಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ 6 ಮತ್ತು 7 ರವರ ಸಮಕ್ಷಮ ಆರೋಪಿಯ ಕೋರಿಕೆಯ ಕೈರಬಹವನ್ನು ಬರೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ನಿಪಿ 13 ರಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಯಾವುದೇ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 13 ರ ಪ್ರಕಾರ ನಿಪಿ 10 ರಂತೆ ರಸಿದೀಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡ ರಸಿದೀಗಳ ಪ್ರತ್ಯೇಕ ಪ್ರತ್ಯೇಕ ಸಂಖ್ಯೆಗಳನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನಾನು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ ಎನ್ನುತ್ತಾರೆ.

ಪಂಚರ ಸಮಕ್ಷಮ ನೀವು ವಶಪಡಿಸಿಕೊಂಡ ದಾಖಲೆಗಳ ಮೇಲೆ ನೀವು ಮತ್ತು ಪಂಚರು ಸಹಿ ಮಾಡಿದ ಚೀಟಿ ವಗೈರೆ ಗಳನ್ನು ಅಂಟಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನೀವು ಮತ್ತು ಪಂಚರು ಸಹಿ ಮಾಡಿದ ಚೀಟಿ ವಗೈರೆ ಗಳನ್ನು ಅಂಟಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ, ಆರೋಪಿ ಯಾವುದೇ ತಪ್ಪು ಮಾಡಿಲ್ಲ, ನೀವು ಘಟನಾ ಜಾಗಕ್ಕೆ ಹೋಗಿಲ್ಲ, ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಮ್ಮ ಇಲಾಖೆಯ ಸಿಬ್ಬಂದಿ ಆಗಿರುವುದರಿಂದ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಹಾಜರುಪಡಿಸಿದ ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲ ಆಗುವಂತೆ ಮೇಲಾಧಿಕಾರಿಗಳ ಮಾತು ಕೇಳಿ ಸೃಷ್ಟಿಸಿದ್ದೇವೆ, ಅದಕ್ಕೆ ಪೂರಕವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಹಳಿಯಾಳ